# ತೂಗಾಡುವ ರೆಸ್ಟೋರೆಂಟ್

ವಿಶ್ವದ ಅತ್ಯದ್ಭುತ ಜಾಗಗಳಲ್ಲಿ ಒಂದು ನಮ್ಮ ಕರ್ನಾಟಕದಲ್ಲೇ ಇದೆ ಎಂಬ ವಿಷಯ ಹಲವರಿಗೆ ತಿಳಿದಿರಲಿಕ್ಕಿಲ್ಲ. ಚಿತ್ರದಲ್ಲಿ ಕಾಣುವ ಈ ಸ್ಥಳ ಶಿರಾಡಿ ಘಾಟಿಗೆ ಸಮೀಪದಲ್ಲಿದೆ. ಶಿರಾಡಿ ಘಾಟಿಯನ್ನು ಏರುತ್ತಾ 6–7 ಕಿ.ಮೀ ಕ್ರಮಿಸಿದ ಬಳಿಕ ಈ ಹೊಸ ರೆಸ್ಟೋರೆಂಟ್ ಸಿಗುತ್ತದೆ. ರೆಸ್ಟೋರೆಂಟಿನ ಹೆಸರು– ಸ್ವರ್ಗ. ಎತ್ತರದ ಶಿಖರದ ಪಾರ್ಶ್ವದಲ್ಲಿ ಈ ಹವಾನಿಯಂತ್ರಿತ ರೆಸ್ಟೋರೆಂಟ್ ನಿಂತಿರುವುದೇ ದೊಡ್ಡ ಅಚ್ಚರಿಯ ವಿಷಯ. ನೂರು ವರ್ಷಕ್ಕೂ ಹೆಚ್ಚು ವಯಸ್ಸಾಗಿರುವ ಮರಕ್ಕೆ ಈ ರೆಸ್ಟೋರೆಂಟನ್ನು ಹಗ್ಗದಲ್ಲಿ ಕಟ್ಟಿ ಹಾಕಿದ್ದು, ಇದು ನಿಂತಿರುವುದೇ ಒಂದು ವಿಸ್ಮಯ ಎಂದು ಸ್ಥಳೀಯ ಎಂಜಿನಿಯರ್ ಒಬ್ಬರು ಅಭಿಪ್ರಾಯ ಪಟ್ಟಿದ್ದಾರೆ.

ಈ ಹಿಂದೆ ಇದನ್ನು 'ಸೂಸೈಡ್ ಪಾಯಿಂಟ್' ಎಂದು ಕರೆಯುತ್ತಿದ್ದರು. ಅಮೆರಿಕದ ಅನಿವಾಸಿ ಭಾರತೀಯ ಉದ್ಯಮಿ ಸೂಸಿ ಪಿಂಟೋ ಈ ದಾರಿಯಾಗಿ ಹೋಗುತ್ತಿದ್ದಾಗ, ಸ್ಥಳದ ವಿಹಂಗಮ ನೋಟದಿಂದ ಪ್ರೇರಿತರಾಗಿ ಈ ರೆಸ್ಟೋರೆಂಟನ್ನು ನಿರ್ಮಿಸಿದ್ದಾರೆ. ಹೆಸರಿಗೆ ತಕ್ಕಂತೆ ಇಲ್ಲಿಂದ ಸ್ವರ್ಗಸದೃಶ ದೃಶ್ಯವನ್ನು ವೀಕ್ಷಿಸುತ್ತಾ ಕಾಫಿ ಚಹಾ ಕುಡಿಯಬಹುದು. ರಾಜ್ಯದ ಪ್ರವಾಸೋದ್ಯಮಕ್ಕೆ ಈ ರೆಸ್ಟೋರೆಂಟ್ ಒಂದು ಹೊಸ ಕೊಡುಗೆ ಎನ್ನಬಹುದು.

(ಇನ್ನಷ್ಟು ವಿವರಗಳಿಗೆ ಪುಟ 74 ನೋಡಿ)

